ರಾಜ್ಯದಲ್ಲಿ ಹೊಸದಾಗಿ ಜಾರಿಯಲ್ಲಿರುವ ಪಂಚಾಯತ್ ರಾಜ್ ಕಾನೂನಿನನ್ವಯ ಸಹಕಾರ ಸಂಸ್ಥೆಗಳು

೫೦೪ (೬೯೦) ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು).—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಹೊಸದಾಗಿ ಜಾರಿಯಲ್ಲಿರುವ ಪಂಚಾಯತ್‌ರಾಜ್ ಕಾನೂನು ಪ್ರಕಾರ ಹೊಸದಾಗಿ ರಚಿಸಿರುವ ಪಂಚಾಯತ್ ಕ್ಷೇತ್ರಕ್ಕೆ ಆನುಗುಣವಾಗಿ ಗ್ರಾಮ ಸೇವಾ ಸಹಕಾರ ಸಂಘಗಳ ಅಧಿಕಾರ ವ್ಯಾಪ್ತಿಯನ್ನು ನಿರ್ದಿಷ್ಟಪಡಿಸುವುದು ಆಡಳಿತ ದೃಷ್ಟಿಯಿಂದ ಅವಶ್ಯಕತೆ ಇರುವ ವಿಷಯವನ್ನು ಸರ್ಕಾರ ಗಮನಿಸಿದೆಯೇ ?

ಆ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದ ನೀತಿ ಹಾಗೂ ಕ್ರಮಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ (ಸಹಕಾರ ಸಚಿವರು). —

ಅ) ಇಲ್ಲಾ

ಆ) ಅನ್ವಯಿಸುವುದಿಲ್ಲ.

ರಾಜ್ಯದಲ್ಲಿ ಸಕಾಲದಲ್ಲಿ ಎ.ಪಿ.ಎಂ.ಸಿ. ಗಳಿಗೆ ಚುನಾವಣೆ

೫೦೪ (೬೯೧) ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು).—ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದ ಎಪಿಎಂಸಿ ಗಳಿಗೆ ಸಕಾಲದಲ್ಲಿ ಚುನಾವಣೆ ನಡೆಸದೇ ಇರುವುದನ್ನು ಸರ್ಕಾರ ಗಮನಿಸಿದೆಯೇ ?

ಆ) ಆ ಚುನಾವಣೆ ಎಷ್ಟು ವರ್ಷ ವಿಳಂಬವಾಗಿದೆ ?

ಇ) ಹಾಗಿದ್ದಲ್ಲಿ ಈಗಲಾದರೂ ನಿರ್ದಿಷ್ಟ ಅವಧಿಯಲ್ಲಿ ಚುನಾವಣೆ ನಡೆಸಲು ಸರ್ಕಾರ ಕ್ರಮ ಗಳನ್ನು ಕೈಗೊಳ್ಳುವುದೇ ?

ಶ್ರೀ ಮದನಾಗೋಪಾಲನಾಯಕ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು). —

ಅ) ಹೌದು.

ಆ) ೫ ವರ್ಷಗಳು.

ಇ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆ ನಡೆಸುವ ಅವಧಿಯು ಮುಂಬರುವ ಸಾರ್ವತ್ರಿಕ ಚುನಾವಣೆಗಳು ನಡೆಯುವ ಅವಧಿಯ ಸಮೀಪ ಬರುವ ಹಿನ್ನೆಲೆಯಲ್ಲಿ ಸರ್ಕಾರವು ಸದರಿ ಸಮಿತಿಗಳಿಗೆ ಚುನಾವಣೆ ನಡೆಸಲು ಸಾಧ್ಯವಾಗಲಾರದೆಂದು ಅಭಿಪ್ರಾಯಪಟ್ಟಿದೆ.

ಬಾದಾಮಿ ತಾಲ್ಲೂಕು ಗುಳಿದೇಗುಡ್ಡದ ಕರಿಗೇರಿ ಕೃಷಿ ಗ್ರಾಮ ಸೇವಕ ಹುದ್ದೆ ಕಡಿಮೆ ಮಾಡಿರುವುದು

೫೦೯ (೮೪೧) ಶ್ರೀ ಹೆಚ್. ವೈ. ಮೇಟಿ (ಗುಳೇದಗುಡ್ಡ).—ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬಾದಾಮಿ ತಾಲ್ಲೂಕು ಗುಳೇದೇಗುಡ್ಡದ ಮತ ಕ್ಷೇತ್ರದ ಕರಿಗೇರಿ ಕೃಷಿ ಗ್ರಾಮ ಸೇವಕರ ಹುದ್ದೆಗಳನ್ನು ಕಡಿಮೆ ಮಾಡುವ ಬಗ್ಗೆ ಸರ್ಕಾರದ ಆಲೋಚನೆ ಇದೆಯೇ ?

ಆ) ಹಾಗಿದ್ದಲ್ಲಿ ಆದಕ್ಕೆ ಕಾರಣವೇನು ?

ಇ) ಈ ರೀತಿ ಕಡಿಮೆ ಮಾಡಿದರೆ ರೈತರಿಗೆ ತೊಂದರೆಯಾಗುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ ?

ಈ) ಬಂದಿದ್ದಲ್ಲಿ ಸರ್ಕಾರವು ಕಡಿಮೆ ಮಾಡದಂತೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎನ್. ಹುಚ್ಚ ಮಾಸ್ತಿಗೌಡ (ಕೃಷಿ ಸಚಿವರು).—

ಆ) ಬಾದಾಮಿ ತಾಲ್ಲೂಕು ಗುಳೇದಗುಡ್ಡ ಮತ ಕ್ಷೇತ್ರದ ಕರಿಗೇರಿ ವೃತ್ತದಲ್ಲಿ ಗ್ರಾಮ ಸೇವಾ ಹುದ್ದೆಯು ಇರುವುದಿಲ್ಲ. ಆದರೆ ಒಂದು ಕೃಷಿ ಸಹಾಯಕ ಹುದ್ದೆಯು ಇರುತ್ತದೆ. ಈ ಹುದ್ದೆಯು ಸರ್ಕಾರದ ಆದೇಶ ಸಂಖ್ಯೆ :ಎಹೆಚ್‌ಡಿ ೧೩೦ ಎಜಿಡಿ ೯೧, ದಿನಾಂಕ ೨೬-೬-೧೯೯೧ ರಲ್ಲಿ ರದ್ದಾಗಿರಕತ್ತದೆ. ಈ ಹುದ್ದೆಯನ್ನು ಪುನರ್‌ಜೀವನಗೊಳಿಸಲು ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ೧೯೯೦-೯೧ನೇ ಸಾಲಿನ ಅಯವ್ಯಯ ಪ್ರಸ್ತಾವನೆಯನ್ನು ಸಲ್ಲಿಸುವಾಗ ಹುದ್ದೆಯು ಖಾಲಿ ಇದ್ದ ಪ್ರಯುಕ್ತ ಶೂನ್ಯ ಆಯವ್ಯಯ ನಿಯಮದ ಪ್ರಕಾರ ಹುದ್ದೆಯು ರದ್ದಾಗಿರುತ್ತದೆ.

ಇ) ಹೌದು.

ಈ) ಈಗಾಗಲೇ ಸದರಿ ಹುದ್ದೆಯನ್ನು ಪುನರ್‌ಜ್ಜೀವನಗೊಳಿಸಲು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ.

ಸೇಡಂ ಕ್ಷೇತ್ರದಲ್ಲಿ ರೋಜ್‌ಗಾರ್ ಯೋಜನೆ

೫೧೦ (೭೬೪) ಶ್ರೀ ಬಸವಂತ ರೆಡ್ಡಿ ವೋತಕಪಲ್ಲಿ (ಸೇಡಂ).—ಮಾನ್ಯ ಗಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಆ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಹಾಗೂ ಚಿತ್ತಾಪುರ ತಾಲ್ಲೂಕಿನ ೧೧ ಗ್ರಾಮಗಳಲ್ಲಿ ಮಂಡಲ ಪಂಚಾಯತಿ ವ್ಯಾಪ್ತಿಯಲ್ಲಿ ಜವಾಹರ್ ರೋಜಗಾರ್ ಯೋಜನೆಯಡಿಯಲ್ಲಿ ೯೨-೯೩, ೯೩-೯೪ನೇ ಸಾಲುಗಳಲ್ಲಿ ಖರ್ಚಾಗಿರುವ ಹಣವೆಷ್ಟು ? (ಗ್ರಾಮವಾರು ಹಾಗೂ ಕಾಮಗಾರಿವಾರು ವಿವರ ನೀಡುವುದು)

ಆ) ೧೯೯೨-೯೩, ೯೩-೯೪ನೇ ಸಾಲಿನ ಕ್ರಿಯಾ ಯೋಜನೆಯಂತೆ ಎಲ್ಲಾ ಕೆಲಸಗಳು ಪೂರ್ತಿಯಾಗಿರುವುದೇ ? (ಕಾಮಗಾರಿ ಹಾಗೂ ಗ್ರಾಮವಾರು ವಿವರ ನೀಡುವುದು)

ಇ) ಜವಹಾರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ಕ್ರಿಯಾ ಯೋಜನೆಯಂತೆ ಹಣ ಖರ್ಚಾಗಿ ಸಹ ಕೆಲಸಗಳು ಉಳಿದಿರುವುದೇ?(ಅವುಗಳ ವಿವರ ನೀಡುವುದು)

ಈ) ಆ ಹಣ ಖರ್ಚಾಗಿ ಸಹ ಕೆಲಸಗಳು ಪೂರ್ತಿಯಾಗದಿದ್ದರೆ ಯಾವಾಗ ಪೂರ್ತಿಗೊಳಿಸಲಾಗುವುದು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಆ) ಸದರಿ ತಾಲ್ಲೂಕಿನ ೧೧ ಮಂಡಲ ಪಂಚಾಯತಿ ವ್ಯಾಪ್ತಿಯಲ್ಲಿ ಜವಾಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ೧೯೯೨-೯೩ ಮತ್ತು ೧೯೯೩-೯೪ನೇ ಸಾಲುಗಳಲ್ಲಿ ಕ್ರಮವಾನುಸಾರವಾಗಿ ರೂ. ೧೦.೩೮೭ ಲಕ್ಷ ಹಾಗೂ ೪೭.೬೨ ಲಕ್ಷ ರೂ. ಗಳನ್ನು ಖರ್ಚು ಮಾಡಲಾಗಿದೆ. ಚಿತ್ತಾಪುರ ತಾಲ್ಲೂಕಿನ ೧೧ ಗ್ರಾಮಗಳಲ್ಲಿ ೧೯೯೨-೯೩ ಮತ್ತು ೧೯೯೩-೯೪ನೇ ಸಾಲುಗಳಲ್ಲಿ ಕ್ರಮವಾನುಸಾರವಾಗಿ ರೂ. ೭.೭೭೩ ಲಕ್ಷ ಹಾಗೂ ರೂ. ೫೫.೬೨೮ ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಗ್ರಾಮವಾರು ಹಾಗೂ ಕಾಮಗಾರಿವಾರು ವಿವರ ತೋರಿಸುವ ತಃಖ್ತೆಯನ್ನು ಲಗತ್ತಿಸಿದೆ.

ಆ) ಸೇಡಂ ತಾಲ್ಲೂಕಿನಲ್ಲಿ ೧೯೯೨-೯೩ನೇ ಸಾಲಿನಲ್ಲಿ ೨೧೫ ಕಾಮಗಾರಿಗಳನ್ನು ಕೈಗೊಂಡು ಅವುಗಳಲ್ಲಿ ೭೬ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಆದರಂತೆ ೧೯೯೩-೯೪ನೇ ಸಾಲಿನಲ್ಲಿ ೩೦೬ ಕಾಮಗಾರಿಗಳನ್ನು ಕೈಗೆತ್ತಿಕೊಂಡು, ಅವುಗಳಲ್ಲಿ ೧೫೯ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಚಿತ್ತಾಪುರ ತಾಲ್ಲೂಕಿನ ೧೧ ಗ್ರಾಮಗಳಲ್ಲಿ ೧೯೯೨-೯೩ನೇ ಸಾಲಿನಲ್ಲಿ ೭೧ ಕಾಮಗಾರಿಗಳನ್ನು